ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಶುಕ್ರವಾರ 15ನೇ ಸೆಪ್ಟೆಂಬರ್ 1995ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ರಮೇಶ ಕುಮಾರ್)** ಅವರು ಪೀಠವನ್ನು ಅಲಂಕರಿಸಿದ್ದರು.

ಸಂತಾಪ ಸೂಚನೆ

ಅಧ್ಯಕ್ಷರು : ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಸೀತಾರಾಮ ಕೂಸಯ್ಯ ಅಮೀನ್ ಅವರು ದಿನಾಂಕ 14.9.1995 ರಂದು ನಿಧನರಾದುದನ್ನು ವಿಷಾದದಿಂದ ಸದನಕ್ಕೆ ತಿಳಿಸುತ್ತಿದ್ದೇನೆ.

ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಶ್ರೀಯುತರು 1967 ರಿಂದ 1972ರವರೆಗೆ ಉಡುಪಿ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ದಕ್ಷಿಣ ಕನ್ನಡ ಜಿಲ್ಲೆಯ ಅಗ್ರಗಣ್ಯ ನಾಯಕರಾಗಿ, ಜಿಲ್ಲೆಯ ಸಾಮಾಜಿಕ, ರಾಜಕೀಯ ಹಾಗೂ ಕ್ರೀಡಾ ಕ್ಷೇತ್ರಗಳಲ್ಲಿ ಅಪಾರ ಸೇವೆ ಸಲ್ಲಿಸಿದ್ದ ಶ್ರೀಯುತರು ಯಾಂತ್ರೀಕೃತ ಮೀನುಗಾರಿಕೆಗೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದರು.

ಜಿಲ್ಲಾ ತುಳು ಕೂಟದ ಅಧ್ಯಕ್ಷರಾಗಿ, ಹಲವಾರು ಬ್ಯಾಂಕುಗಳ ನಿರ್ದೇಶಕರಾಗಿ, ಉಪಾಧ್ಯಾಯರಾಗಿ, ಸಂಘ ಸಂಸ್ಥೆಗಳೊಡನೆ ಹೆಚ್ಚಿನ ಸಂಪರ್ಕ ಇರಿಸಿಕೊಂಡಿದ್ದ ಶ್ರೀಯುತರು ಮೀನುಗಾರರ ಅಭ್ಯುದ್ಯಯಕ್ಕಾಗಿ ಹೆಚ್ಚಿನ ಶ್ರಮವಹಿಸಿದ್ದರು.

ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಸದನವು ಒಂದು ನಿಮಿಷಗಳ ಕಾಲ ಮೌನವನ್ನಾಚರಿಸಿತು)

ಅಧ್ಯಕ್ಷರು : ಈ ಸದನ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

ಶ್ರೀವಾಸುದೇವನ್‌ರವರಿಗೆ ಸರ್ವೋಚ್ಚನ್ಯಾಯಾಲಯದಿಂದ ಜೈಲು ಶಿಕ್ಷೆ

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನೆನ್ನೆ ದಿವಸ ವೀರಪ್ಪ ಮೊಯಿಲಿಯವರು ವಾಸುದೇವನ್ ಹಗರಣದ ಬಗ್ಗೆ ಮಾತನಾಡುತ್ತಿರುವಂಥ ಕಾಲದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳು ಒಂದು ಸಲಹೆಯನ್ನು ಕೊಟ್ಟರು. ನಮ್ಮ ಮುಖ್ಯಮಂತ್ರಿಗಳು ನಾಳೆ ಬರುತ್ತಿದ್ದಾರೆ, ಅವರು ಸ್ಟೇಟ್‌ಮೆಂಟ್ ಮಾಡಿದ ಮೇಲೆ ಅವರ ಸಮಕ್ಷಮ ಚರ್ಚೆಯನ್ನು ಮುಂದುವರಿಸುವುದು ಉತ್ತಮವೆಂದು ಅವರು

ತಮ್ಮ ಸ್ಥಾನದಲ್ಲಿದ್ದಂಥ ಅಧ್ಯಕ್ಷರಿಗೆ ಸಲಹೆಯನ್ನು ಕೊಟ್ಟರು. ನಿನ್ನೆ ಇನ್ನೂ ಒಂದೆರಡು ಗಂಟೆ ನಡೆಯುವ ಸದನವನ್ನು ಮುಂದೂಡುವ ಸಂದರ್ಭವನ್ನು ನೋಡಿದರೆ, ಸಹಜವಾಗಿ ಮಾನ್ಯ ಮುಖ್ಯಮಂತ್ರಿಗಳು ಬಂದು ವಾಸ್ತವಿಕ ಸ್ಥಿತಿ ಏನು ಎನ್ನುವ ಬಗ್ಗೆ ಒಂದು ಸ್ಟೇಟ್‌ಮೆಂಟನ್ನು ಮಾಡಬೇಕಾಗುತ್ತದೆ. ನಾವು ಕೇಳಿದಂಥ ಪ್ರಶ್ನೆಗೆ ಉತ್ತರ ಕೊಟ್ಟು ಚರ್ಚೆಯಾಗಬೇಕಾಗುತ್ತದೆ. ನಂತರ ಬೇಕಾದರೆ ತಾವು ಪ್ರಶ್ನೋತ್ತರ ತೆಗೆದುಕೊಳ್ಳಬೇಕಾಗುತ್ತದೆ. ಆದಕಾರಣ ಈಗ ಪ್ರಶ್ನೋತ್ತರ ವೇಳೆಯನ್ನು ಮುಂದೂಡಿ ನೀವು ಕಾರ್ಯಕಲಾಪಗಳನ್ನು ನೇರವಾಗಿ ತೆಗೆದುಕೊಳ್ಳುವಂಥದ್ದು ಒಂದು ಒಳ್ಳೆಯ ಪದ್ಧತಿಯಾಗಬಹುದು. ನೆನ್ನೆ ಯಾವ ಹಂತದಲ್ಲಿ ನಿಂತಿತ್ತು, ತಾವು ಅದನ್ನು ದಯಮಾಡಿ ಪರಿಶೀಲಿಸಿ ಇವೊತ್ತು ಮುಖ್ಯಮಂತ್ರಿಗಳು ಬಂದಿದ್ದಾರೆ, ಅವರು ಎಂದು ಏನಾಗಿದೆ ಎಂದು ಸ್ಟೇಟ್‌ಮೆಂಟ್ ಮಾಡಬೇಕಾಗುತ್ತದೆ. ಸುಪ್ರೀಮ್ ಕೋರ್ಟ್ ಮುಂದೆ ಏನು ಅಫಿಡೆವಿಟ್ ಹಾಕಿದ್ದರು, ಸರ್ಕಾರ ತಪ್ಪು ಮಾಡಿದೆ ಎಂದು ಹಾಕಿದ್ದರೋ, ಅಧಿಕಾರಿ ತಪ್ಪು ಮಾಡಿದ್ದರು ಎಂದು ಹಾಕಿದ್ದರೋ, ಎಂಬುದರ ಬಗ್ಗೆ ಒಂದು ಸ್ಟೇಟಮೆಂಟ್ ಕೊಡುವುದು ಒಂದು ಒಳ್ಳೆಯ ಸಂಪ್ರದಾಯ. ಆದಕಾರಣ ದಯಮಾಡಿ ಅವರನ್ನು ಕರೆಯಿಸಿ ನಂತರ ಸದನದ ಕಾರ್ಯಕಲಾಪವನ್ನು ಮುಂದುವರಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾನು, ಮಾನ್ಯ ಖಿರ್ಗೆಯವರು, ಯಡಿಯೂರಪ್ಪನವರು ಮತ್ತು ಇನ್ನಿತರರು ಸೇರಿ ಕೊಟ್ಟಿರತಕ್ಕಂಥ ನಿಲುವಳಿ ಸೂಚನೆಯನ್ನು ತಾವು ತೆಗೆದುಕೊಳ್ಳಬೇಕೆಂದು ತಮ್ಮ ಮನವನ್ನು ಒಲಿಸಲು ನಾವು ಇಡೀ ನಾಲ್ಕು ಗಂಟೆಯವರೆಗೆ ವಾದವನ್ನು ಮಂಡಿಸಿದೆವು. ಇದಕ್ಕಿದ್ದಹಾಗೇ ತಕ್ಷಣ ಸಭೆಯನ್ನು ಮುಂದೂಡಿದರು. ಅದನ್ನು ಏತಕ್ಕೆ ಮುಂದೂಡಿದರು ಎನ್ನುವ ಪ್ರಶ್ನೆಗೆ ಹೋಗುವುದಿಲ್ಲ. ನಾವು ತಮ್ಮ ಮನವನ್ನು ಒಲಿಸಲಿಕ್ಕೆ ಬಹಳ ಪ್ರಯತ್ನವನ್ನು ಮಾಡಿದ್ದೇವೆ. ತಾವು ಅದನ್ನು ಒಪ್ಪಿದ್ದೀರೋ ಹೇಗೆ ಎನ್ನುವಂಥದ್ದು ಒಂದು ಪ್ರಶ್ನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ : ಇನ್ನು ಮಾತನಾಡುವವರು ಬಹಳ ಜನ ಇದ್ದಾರೆ. ಈಗ ರೂಲಿಂಗ್ ಆದರೆ ಅವರಿಗೆ ತೊಂದರೆಯಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಾನು ತಮಗೆ ಏನು ಹೇಳುತ್ತಿದ್ದೇನೆಂದರೆ ಪ್ರಶ್ನೋತ್ತರ ಕಾಲವನ್ನು ತಾವು ದಯವಿಟ್ಟು ಬದಿಗೊತ್ತಿ ಇನ್ನು ಅನೇಕ ಜನ ಮಾತನಾಡುವವರಿದ್ದಾರೆ. ದಯವಿಟ್ಟು ತಾವು ಅದನ್ನು ಬದಿಗೊತ್ತಿ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಿ.

ಶ್ರೀ ಜಿ.ಬಿ. ಶಿವಕುಮಾರ್ : ಮಾನ್ಯ ಅಧ್ಯಕ್ಷರೇ, ಈ ಒಂದು ಸದನದಲ್ಲಿ ಈಗಾಗಲೇ ನಾಲ್ಕೈದು ಬಾರಿ ಪ್ರಶ್ನೋತ್ತರ ವೇಳೆ ಮುಂದೂಡಲಾಗಿದೆ. ವಿಷಯದ ಗಾಂಭೀರ್ಯತೆಯನ್ನು ಅರಿತು ತಾವು ಮಾಡಿದರೂ ಕೂಡ ನನ್ನ ಅರಿಕೆ ಇಷ್ಟೇ ಇಲ್ಲಿ ಬಹುತೇಕ ಹೊಸ ಸದಸ್ಯರಿದ್ದಾರೆ. ನಮಗೆ ತಿಳಿದಿರತಕ್ಕಂಥದ್ದು, ಸರ್ಕಾರ ಬಾಯಿ ತೆಗೆಯತಕ್ಕಂಥದ್ದು ಈ ಸದನ ನಡೆಯುವಾಗ ಅಷ್ಟೇ. ಅವರಿಗೆ ಸ್ಪಷ್ಟವಾದ ಉತ್ತರ ಅವರ ಕ್ಷೇತ್ರಕ್ಕೆ ಸೀಮಿತವಾದಂಥದ್ದು ಹಲವಾರು ಇಲಾಖೆಯ ಬಗ್ಗೆ ತಿಳಿದುಕೊಳ್ಳುವಂಥ ಪಕ್ಕನ್ನು ನಾವು ಕಿತ್ತುಕೊಳ್ಳುವುದು ಬೇಡ. ತಾವು ಈ ವಿಷಯದ ಗಾಂಭೀರ್ಯತೆಯನ್ನು ತಿಳಿದು ನೆನ್ನೆ

ಅವಕಾಶವನ್ನು ಮಾಡಿಕೊಟ್ಟಿದ್ದೀರಿ, ಇಮೊತ್ತು ಕೂಡ ಅವಕಾಶ ಮಾಡಿ ಕೊಡಬಹುದು. ಸರ್ಕಾರ ಕೂಡ ಉತ್ತರ ಕೊಡಲಿಕ್ಕೆ ಸಜ್ಜಾಗಿ ಬಂದಿದೆ. ನನ್ನ ಪ್ರಾರ್ಥನೆ ಇಷ್ಟೆ. ಸದಸ್ಯರ ಹಕ್ಕನ್ನು ಕಿತ್ತುಕೊಳ್ಳುವುದು ಬೇಡ ಪ್ರಶ್ನೋತ್ತರ ವೇಳೆಯನ್ನು ದಯಮಾಡಿ ಮುಂದಕ್ಕೆ ಹಾಕಬಾರದೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ನಿನ್ನೆ ಸದನ ಮುಂದೂಡಿದ ಮೇಲೆ ಯಾವ ಸ್ಥಿತಿಯಿಂದ ಇಮೊತ್ತು ಮುಂದುವರಿಯಬೇಕೆಂದು ಹೇಳುವ ಬಗ್ಗೆ ನನಗೆ ಸಾಕಷ್ಟು ಅನುಭವ ಇಲ್ಲದೇ ಇದ್ದ ಕಾರಣ, ಸಾಕಷ್ಟು ಅನುಮಾನ ಇದ್ದ ಕಾರಣ, ನಾನು ಪರಿಣಿತರಿಂದ ತಿಳಿದುಕೊಂಡಿದ್ದೇನೆ ಮತ್ತು ಹಿರಿಯ ಸಂಸದೀಯ ಪಟುಗಳೊಂದಿಗೆ ಚರ್ಚೆ ಮಾಡಿದ್ದೇನೆ, ನಮ್ಮ ಕಾರ್ಯಾಲಯದ ಮುಖಾಂತರ ಲೋಕಸಭಾ ಕಾರ್ಯಾಲಯದ ಜೊತೆ ಸಂಪರ್ಕ ಇಟ್ಟುಕೊಂಡಿದ್ದೇವೆ. ಇಮೊತ್ತಿನ ಕಾರ್ಯಕ್ರಮ ನಾವು ಪ್ರಶ್ನೋತ್ತರದ ಅವಧಿಯನ್ನು ಮುಂದುವರಿಸಿ ನಂತರ ನೀವು ಪ್ರಸ್ತಾಪಿಸಿ ಮನವಿಯನ್ನು ಏನು ಸಲ್ಲಿಸಿದ್ದೀರಿ ಅದನ್ನು ಮುಂದುವರೆಸಬಹುದು. ಏನೂ ತೊಂದರೆ ಇಲ್ಲ. ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ ದಯಮಾಡಿ ಎಲ್ಲರೂ ಸಹಕರಿಸಿ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ : ನನಗೆ ಉತ್ತರವನ್ನು ಒದಗಿಸಿಲ್ಲ ಸನ್ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು : ಅವರಿಗೆ ಆ ಉತ್ತರ ಒದಗಿಸಿ ಕೊಡಿ, ಆ ಪ್ರಶ್ನೆ ಆ ಮೇಲೆ ತೆಗೆದುಕೊಳ್ಳೋಣ. ತಾವು ದಯಮಾಡಿ ಸಹಕರಿಸಿ. ಹೈದ್ರಾಬಾದ್ ಕರ್ನಾಟಕವೆಂದರೆ ನನಗೆ ಸಹಾನುಭೂತಿ.

ಮಾನ್ಯ ಸದಸ್ಯರು : ನೀವು ಹೀಗೆ ಹೇಳಿದರೆ ನಮ್ಮ ಗತಿ ಏನು ಏನು ಮಾನ್ಯ ಅಧ್ಯಕ್ಷರೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವೈಜನಾಥ್ ಪಾಟೀಲರೇ, ಹೀಗೆಲ್ಲಾ ಆದರೆ ನಮಗೆಲ್ಲಾ ತೊಂದರೆ ಬರುತ್ತದೆ. ಈ ರೀತಿ ಕನ್ಸಿಷನ್ ಕೊಡುತ್ತಾ ಹೋದರೆ, ನಾಳೆ ಕಷ್ಟವಾಗುತ್ತದೆ. ಯಾವುದಾದರೂ ಮುಂದೆ ಸಿಗಬೇಕಾದರೂ ಸಿಗುವುದಿಲ್ಲ. ಹೈದ್ರಾಬಾದ್ ಕರ್ನಾಟಕಕ್ಕೆ ಅನ್ಯಾಯವಾಗುತ್ತದೆ ಅದಕ್ಕಾಗಿ ಕೊಡುವ ಹಾಗೆ ಉತ್ತರವನ್ನು ಅವರಿಗೆ ಕೊಡಿ.

ದೇವನಹಳ್ಳಿ ಟೌನ್‌ಗೆ ಕುಡಿಯುವ ನೀರು ಸರಬರಾಜು

332 - ಶ್ರೀ ಜಿ. ಚಂದ್ರಣ್ಣ (ದೇವನಹಳ್ಳಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೇವನಹಳ್ಳಿ ಟೌನಿಗೆ ನೀರು ಸರಬರಾಜು ಮಾಡುವ ಬಗ್ಗೆ ಸಮಗ್ರ ವರದಿಯನ್ನು ತಯಾರಿಸಲಾಗಿದೆಯೇ?

ಆ) ದೇವನಹಳ್ಳಿ ಟೌನಿಗೆ ನೀರು ಸರಬರಾಜು ಮಾಡಲು ಇಲ್ಲಿಯವರೆಗೂ ನಡೆದಿರುವ ಕಾಮಗಾರಿಗಳಾವುವು?

ಇ) ನೀರು ಸರಬರಾಜು ಆಗುತ್ತಿರುವ ವಿಳಂಬಕ್ಕೆ ಹಾಗೂ ಅದನ್ನು ಸರಿಪಡಿಸಲು ಸರ್ಕಾರದವರು ತೆಗೆದುಕೊಂಡು ಕ್ರಮಗಳೇನು?